ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

ಶ್ರೀ ಕೆ. ಎಂ. ಶಿವಲಿಂಗೇಗೌಡ.: ಮಂಡಿಸಿ. ಮಂಡಿಸಿಯಾದ ಮೇಲೆ ನಮ್ಮದು ಒಂದು ಚೂರು ಕೇಳಿ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):– ದಿನಾಂಕ 05–12–2011ರ 1ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–1)

5. ಪ್ರಕಟಣೆ

ಅಧ್ಯಕ್ಷರು: ತೇರದಾಳ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಸಿದ್ದುಸವದಿ ಅವರನ್ನು ವಿಧಾನ ಸಭೆಯಲ್ಲಿ ಸರ್ಕಾರಿ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಪತ್ರ ಮುಖೇನ ತಿಳಿಸಿರುತ್ತಾರೆಂದು ಈ ಮೂಲಕ ಪ್ರಕಟಿಸಲಾಗಿದೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: ಶಾಸಕರ ಹಕ್ಕು ಚ್ಯುತಿ ಮಾಡಿರುವ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ:–

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕರೆ):– ಮಾನ್ಯ ಅಧ್ಯಕ್ಷರೆ, ಈ ಸರ್ಕಾರದಲ್ಲಿ ಮತ್ತು ತಮ್ಮಲ್ಲಿ ಈ ವಿಚಾರದಲ್ಲಿ ಹೆಚ್ಚಿಗೆ ಹೇಳುವುದಿಲ್ಲ. ನಮ್ಮ ಘನತೆ ಗೌರವಕ್ಕೆ ಕುಂದಾದಾಗ, ನಮ್ಮ ಹಕ್ಕುಚ್ಯುತಿ ಆದಂತಹ ಸಂದರ್ಭದಲ್ಲಿ ನಮ್ಮನ್ನು ಕಾಪಾಡುವುದಕ್ಕೆ ನೀವು ಅಧ್ಯಕ್ಷರಿರಬೇಕು. ಅದರ ಜೊತೆಗೆ ಸರ್ಕಾರವೂ ಸಹಾಯ ಮಡಬೇಕು. ನಾನು ಆಗಲೇ ನಿಮಗೆ ಪೂರ್ಣ ಪ್ರಮಾಣದ ಮಾಹಿತಿಯನ್ನು ಕೊಟ್ಟಿದ್ದೇನೆ. ಆದರೆ, ಬಹಳ ಪತ್ರಿಕೆಯಲ್ಲಿ ಬಂದಿದೆ. ಅದು ಬಹಳ ಜನಕ್ಕೆ ಗೊತ್ತಿಲ್ಲ. ಬಸವೇಶ್ವರ ಜಯಂತಿಯ ಪೂರ್ವಭಾವಿಯ ಸಭೆಗೆ ತಹಶೀಲ್ದಾರರು ನನ್ನನ್ನು ಕರೆದಾಗ, ನಾನು ಆ ಸಭೆಗೆ ಹೋದಂತಹ ಸಂದರ್ಭದಲ್ಲಿ ಒಂದೇ ಒಂದು

ಕುರ್ಚಿಯನ್ನು ಅಲ್ಲಿ ಹಾಕಿ ಒಬ್ಬ ಶಾಸಕರಿಗೆ ಕುರ್ಚಿ ಇಲ್ಲದೇ ನಿಲ್ಲಿಸಿದಂತಹ ಪ್ರಸಂಗವನ್ನು ನಾನು ತಮಗೆ ಸವಿಸ್ತಾರವಾಗಿ ಬರೆದು ಕೊಟ್ಟಿದ್ದೇನೆ. ಆದರೆ, ಆರು ತಿಂಗಳುಗಳು ಆಯಿತು. ಬಸವೇಶ್ವರ ಜಯಂತಿ ಮುಗಿದು 5–6 ತಿಂಗಳುಗಳಾಯಿತು. ಆದರೆ, ಇತ್ತೀಚೆಗೆ ಅದರ ಬಗ್ಗೆ ಯಾವುದೇ ರೀತಿಯಾದಂತಹ ಕ್ರಮವನ್ನು ಜರುಗಿಸಿಲ್ಲ. ಈ ರೀತಿ ಕ್ರಮ ಜರುಗಿಸದೇ ಹೋದರೆ ಬಹಶಃ ಆ ಸದಸ್ಯರಿಗೆ ಇರುವಂತಃ ಹಕ್ಕನ್ನು ಕಾಪಾಡುವುದಕ್ಕೆ ಸಾಧ್ಯವಿದೆಯೇ? ನೀವು ಪತ್ರ ಬರೆದಿದ್ದೀರಿ. ಪತ್ರ ಬರದು ಆದಮೇಲೆ ಅವರು Assistant Commissioner ರವರನ್ನು enquiry ಗೆ ಹಾಕಿದರು Assistant Commissioner ರವರು ನನ್ನನ್ನೂ ಕರೆದರು ಮತ್ತು ಅವರನ್ನೂ ಕರೆದರೂ, ಇಬ್ಬರ ಸ್ಟೇಟ್‌ಮೆಂಟ್ ಅನ್ನು ತೆಗೆದುಕೊಂಡರು. ಅವರು ಈಚೆ ಕಡೆಗೆ ಬಂದು ತಹಶೀಲ್ದಾರ್ ಅವರು ನನಗೆ ಹೇಳುತ್ತಾರೆ. 'ಇಷ್ಟೇ ಇದರ ಹಣೆಬರಹ. ಇಷ್ಟಕ್ಕೆ ಏಕೆ ಇವೆಲ್ಲಾ ಮಾಡಬೇಕಿತ್ತು? ಎಂದು ಅಂದುಕೊಂಡು ಹೋದರು. ವಿಧಾನಸಭೆ ಅಧ್ಯಕ್ಷರಲ್ಲಿ ನಾನು ಮನವಿ ಮಾಡುವುದು ದಯಮಾಡಿ, ನನಗೆ ಆಗಿರತಕ್ಕಂತಹ ನೋವಿನ ಬಗ್ಗೆ ತಮ್ಮ ಹತ್ತಿರ ಬಂದು ಎಂಟು ದಿವಸ ಹೇಳಿದ್ದೇನೆ. ನಿಮಗೆ ಆಗಲಿ, ಸರ್ಕಾರಕ್ಕೆ ಆಗಲಿ ಯಾವುದೇ ಒಬ್ಬ ಶಾಸಕನ ಕಣ್ಣೀರನ್ನು ಹಾಕಿಸುವುದು ತರವಲ್ಲ. ಆವತ್ತೇನು ಪಿತೂರಿ ನಡೆಯುತ್ತಿತ್ತು ಎಂದರೆ ನನಗೆ ಕುರ್ಚಿ ಇಲ್ಲದ ಹಾಗೆ ಮಾಡುವುದು. ನಾನು ಹೋಗಿ ಆ ತಹಶೀಲ್ದಾರರನ್ನು ಹಿಡಿದುಕೊಂಡು ಹೊಡೆಯುವುದು. ಆಗ ನನ್ನನ್ನು ಕರೆದುಕೊಂಡು ಹೋಗಿ ಜೈಲಿಗೆ ಹಾಕುವುದು ಎಂಬ ಪಿತೂರಿ ನಡೆದಿತ್ತು. ಆದರೆ ನನಗೂ ಸ್ವಲ್ಪ ತಾಳ್ಮೆ ಇದ್ದುದರಿಂದ ನಾನು ತಲೆಮೇಲೆ ಕೈಹೊತ್ತುಕೊಂಡು ಕುಳಿತುಕೊಂಡೆ. ಪತ್ರಿಕಾ ಮಾಧ್ಯಮದವರು, ನೂರಾರು ಜನ ಸಾರ್ವಜನಿಕರು ಆ ಪೂರ್ವಭಾವಿ ಸಭೆಯಲ್ಲಿದ್ದರು. ಸರ್ಕಾರಿ ಅಧಿಕಾರಿಗಳಿದ್ದರು. ಅಂತಹ ಸಂದರ್ಭದಲ್ಲಿ ನಾನು ಅಷ್ಟರಮಟ್ಟಿಗೆ ನಿಮ್ಮನ್ನು ವಿನಂತಿ ಮಡಿಕೊಂಡರೂ ನೀವು ಬರೇ ಒಬ್ಬ Assistant Commissioner ಅವರ ಹತ್ತಿರ enquiry ಮಾಡಿಸಿದಿರೇ ಹೊರತು ಬೇರೆ ಏನೂ ಮಾಡಲಿಲ್ಲ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಕೊಟ್ಟೆ, ನನ್ನ MLA ಗಿರಿಗೆ ರಾಜೀನಾಮೆ ಕೊಟ್ಟು ಹೋಗುತ್ತೇನೆ ಎಂದು ಹೇಳಿದೆ. ಆದರೂ ನಿಮಗೆ ನ್ಯಾಯ ದೊರಕಿಸಿಕೊಡುವಂಥ ಕರುಣೆಯೂ ಬರಲಿಲ್ಲವಲ್ಲ ಏಕೆ? ಏತಕ್ಕೋಸ್ಕರ ಒಬ್ಬ ಸದಸ್ಯರಿಗೆ ಕಣ್ಣೀರು ಹಾಕಿಸುತ್ತೀರಿ? ಸದಸ್ಯರುಗಳಿಗೇ ಈ ಗತಿಯಾದರೆ ಸಾಮಾನ್ಯ ಜನರ ಗತಿ ಏನು? ನೀವು enquiry ಮಾಡಿಸಿ ಹಕ್ಕುಚ್ಯುತಿಗೆ ಹಾಕಿ ನಿರ್ಣಯ ಆಗಲಿ ನಾನು ತಪ್ಪು ಮಾಡಿದ್ದರೆ, ಸುಳ್ಳು ಹೇಳಿದ್ದರೆ ನಾನು ಎಂ.ಎಲ್.ಎ., ಗಿರಿಗೆ ರಾಜೀನಾಮೆ ಕೊಟ್ಟು ಹೋಗುತ್ತೇನೆಂದು ನಿಮ್ಮ

ಹತ್ತಿರ ನಾನು ಪ್ರಮಾಣ ಪೂರ್ವಕವಾಗಿ ಬರದುಕೊಡಲಿಲ್ಲವೇ? ಏತಕ್ಕೋಸ್ಕರ ಈ ರೀತಿ ಶಾಸಕರಿಗೆ ಹಿಂಸೆ ಕೊಡುತ್ತೀರಿ?

ಅಧ್ಯಕ್ಷರು: ತಾವು ಏನು ಪತ್ರವನ್ನು ತಹಶೀಲ್ದಾರ್ ಮೇಲೆ ಕೊಟ್ಟಿದೀರಿ enquiry ಯಲ್ಲಿ ನ್ಯಾಯ ಸಿಗಲಿಲ್ಲವೆಂದು ತಾವು ಏನು ಹೇಳಿದ್ದೀರಿ, ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಲಾಗುತ್ತದೆ. ಈಗ ಅವರನ್ನು ವರ್ಗಾವಣೆ ಮಾಡಿದ್ದಾರೆ.

ಶ್ರೀ ಡಿ. ಕೆ. ಶಿವಕುಮಾರ್: ಅಧ್ಯಕ್ಷರೆ, ಹಕ್ಕುಚ್ಯತಿ ಒಂದೇ ಇದಕ್ಕೆ ಪರಿಹಾರವಲ್ಲ. ಅಧಿವೇಶನ ನಡೆಯುತ್ತಿದೆ. ಈಗ ತಾನೇ ಸಂಗಮೇಶ್ವರ ವಿಚಾರಕ್ಕೆ ಪ್ರಸ್ತಾವನೆ ಬಂದಾಗ ತಹಶೀಲ್ದಾರ್ ಮೇಲೆ ಕಂಪ್ಲೇಂಟ್ ಕೊಟ್ಟು ಕೇಸ್ ರಿಜಿಸ್ಟರ್ ಆಗಿರುವುದು ಇದೆಲ್ಲ ತಮ್ಮೆದುರಿಗೆ ಆಯಿತು. responsible MLA, ಅವರಿಗೆ ಗೌರವ, protocal ಮತ್ತೊಂದು ಚೇರ್ ಕೊಡದಿರುವುದು ಅವಮಾನ ಮಾಡುತ್ತಿರುವುದು ಎಲ್ಲಾ ಇದೆ. ಇಂತಹ ಸಂದರ್ಭದಲ್ಲಿ ತಾವು ಎಂತಹ ಸ್ಥಾನದಲಿ ಕುಳಿತಿದ್ದೀರಿ ಎಂದರೆ in justice should not follow from the seat of justice. ನೀವು ಇಲ್ಲಿ ಕುಳಿತಿದ್ದೀರಿ ನೀವು ಎಲ್ಲರಿಗಿಂತ ದೊಡ್ಡವರು. ಸರ್ಕಾರಕ್ಕೆ suspend ಮಾಡುವುದಕ್ಕೆ ಹೇಳಿ, ಸ್ವಾಮಿ ಆಮೇಲೆ ಮಿಕ್ಕಿದ್ದು ವಿಚಾರ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್: ಅವರ ನೋವು ಆರು ತಿಂಗಳಿಂದ ಇದೆ. ಮೊದಲು ಇದನ್ನು ತೀರ್ಮಾನ ಮಾಡಬೇಕು. ನಂತರ ಹಕ್ಕುಚ್ಯುತಿ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)– : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವಾಗ ನಮಗೆ ಏನೂ ಮಾಹಿತಿ ಕೊಟ್ಟಿಲ್ಲ. ಅವರೀಗ ಏನು ಹೇಳುತ್ತಿದ್ದಾರೆಂದರೆ ಅವರು ಮಾನ್ಯ ಸಭಾಧ್ಯಕ್ಷರಿಗೆ ನಾನು ಪತ್ರ ಬರೆದಿದ್ದೆ. ಅದರ ಆಧಾರದ ಮೇಲೆ ಎಲ್ಲಾ ಆಗಿದೆ ಎಂದು ಅವರು ಹೇಳಿರುವಂತಹ ಮಾಹಿತಿಯ ಆಧಾರದ ಮೇಲೆ ಅವರ ಮೇಲೆ ಏನು ತನಿಖೆಯಾಗಬೇಕು, ವಿಚಾರಣೆಯಾಗಬೇಕು ಎಂಬುದನ್ನು ನಿರೀಕ್ಷಿಸಿ ಕೂಡಲೇ ಅವರನ್ನು ಅಮಾನತ್ತಿನಲ್ಲಿ ಇಡುತ್ತೇವೆ.

ಶ್ರೀ ಡಿ. ಕೆ. ಶಿವಕುಮಾರ್: Thank you.